## ಸರ್ಕಾರದ ನಡವಳಿಗಳು

ವಿಷಯ: ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಿಂದ ಅನುಷ್ಠಾನಗೊಳಿಸುತ್ತಿರುವ ಯೋಜನೆಗಳಲ್ಲಿ 1.00 ಲಕ್ಷ ರೂ.ಗಳವರೆಗಿನ ಸಾಲಕ್ಕೆ ಫಲಾನುಭವಿ/ಜಾಮೀನುದಾರರಿಂದ ಸ್ಥಿರಾಸ್ತಿ ಆಧಾರ ಮಾಡುವ ಷರತ್ತಿನ ಬಗ್ಗೆ.

ಓದಲಾಗಿದೆ:
1) ಸರ್ಕಾರದ ಆದೇಶ ಸಂಖ್ಯೆ: ಹಿಂವಕ 467 ಬಿಎಂಎಸ್ 2015 ದಿ: 05/08/2015.
2) ಸರ್ಕಾರದ ಆದೇಶ ಸಂಖ್ಯೆ: ಹಿಂವಕ 468 ಬಿಎಂಎಸ್ 2015 ದಿ: 04/09/2015.
3) ಸರ್ಕಾರದ ಆದೇಶ ಸಂಖ್ಯೆ: ಹಿಂವಕ 458 ಬಿಎಂಎಸ್ 2015 ದಿ: 07/09/2015.
4) ಸರ್ಕಾರದ ಆದೇಶ ಸಂಖ್ಯೆ: ಹಿಂವಕ 469 ಬಿಎಂಎಸ್ 2015 ದಿ: 07/09/2015.
5) ಸರ್ಕಾರದ ಆದೇಶ ಸಂಖ್ಯೆ: ಹಿಂವಕ 457 ಬಿಎಂಎಸ್ 2015 ದಿ: 29/10/2015.
6) ಸರ್ಕಾರದ ಆದೇಶ ಸಂಖ್ಯೆ: ಹಿಂವಕ 559 ಬಿಎಂಎಸ್ 2015 ದಿ: 21/12/2015
7) ವ್ಯವಸ್ಥಾಪಕ ನಿರ್ದೇಶಕರ ಪ್ರಸ್ತಾವನೆ ಸಂಖ್ಯೆ: ದೇಹಿನಿ/ಸ/ಕುಸಾ/ಸಿಆರ್-6/2014-15 ದಿನಾಂಕ: 26/12/2015.

****

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರ.ಸಂ 01 ರಿಂದ 06ರ ವರೆಗೆ 2014-15ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಘೋಷಿಸಿರುವಂತೆ ಈ ಕೆಳಕಂಡ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಸರ್ಕಾರವು ಮಾರ್ಗಸೂಚಿಗಳಿಗೆ ಅನುಮೋದನೆ ನೀಡಿರುತ್ತದೆ.

A. ಸಾಂಪ್ರದಾಯಿಕ ವೃತ್ತಿಗಳಾದ ಧೋಬಿ, ಸವಿತಾ ಸಮಾಜ ಮತ್ತು ತಿಗಳ ಸಮುದಾಯಗಳಿಗೆ ಸೇರಿದ ಜನರ ವೃತ್ತಿ ಕೌಶಲ್ಯಗಳನ್ನು ಉನ್ನತೀಕರಿಸಲು ಮತ್ತು ಆಧುನಿಕ ಉಪಕರಣ ಕೊಳ್ಳಲು ರೂ. 2.00 ಲಕ್ಷಗಳವರೆಗೆ ವಾರ್ಷಿಕ ಶೇ.2ರ ಬಡ್ಡಿ ದರದಲ್ಲಿ ಸಾಲ ಸೌಲಭ್ಯ.

B. ಕುರಿ/ಮೇಕೆ ಸಾಕಾಣಿಕೆಯನ್ನು ಮುಖ್ಯ ಕಸುಬನ್ನಾಗಿಸಿಕೊಂಡಿರುವ ಹಿಂದುಳಿದ ವರ್ಗಗಳ ಜನರ ಆರ್ಥಿಕ ಮಟ್ಟವನ್ನು ಸುಧಾರಿಸಲು ಕುರಿ/ಮೇಕೆ ಸಾಕಾಣಿಕೆಗೆ ಘಟಕ ವೆಚ್ಚ 1 ಲಕ್ಷ ರೂ.ಗಳಂತೆ ವಾರ್ಷಿಕ ಶೇ. 4ರ ಬಡ್ಡಿ ದರದಲ್ಲಿ ಗರಿಷ್ಠ ರೂ. 90,000/-ಗಳ ಸಾಲ ಮತ್ತು ಉಳಿಕೆ ರೂ. 10,000/-ಗಳ ಸಹಾಯಧನ ಸೌಲಭ್ಯ.

C. ಕುಂಬಾರಿಕೆಯ ಕಲಾತ್ಮಕ ಉತ್ಪನ್ನಗಳ ತಯಾರಿಕೆಗೆ ಹಾಗೂ ಕೌಶಲ್ಯತೆ ಹೆಚ್ಚಿಸಲು, ಕುಂಬಾರರು ಹಾಗೂ ಕುಂಬಾರಿಕೆ ಸಂಬಂಧದ ವೃತ್ತಿ ಮಾಡುವವರು ಹೆಚ್ಚಿನ ಸಂಖ್ಯೆಯಲ್ಲಿ ಇರುವ ಕ್ಲಸ್ಟರ್‌ಗಳನ್ನು ಗುರುತಿಸಿ ಕುಂಬಾರ ವೃತ್ತಿ ಸಮಾಜದ ಫಲಾಕಾಂಕ್ಷಿಗಳಿಗೆ ಆಧುನಿಕ ಉಪಕರಣಗಳನ್ನು ಕೊಳ್ಳಲು ರೂ. 50,000/-ಗಳ ವರೆಗೆ (ಸಹಾಯಧನ ರೂ 15,000/- ಹಾಗೂ ಸಾಲ ರೂ. 35,000/-) ಹಾಗೂ ಕಾರ್ಯಾಗಾರ ನಿರ್ಮಿಸಿಕೊಳ್ಳಲು ರೂ. 25,000/- ಸಹಾಯಧನ ಹಾಗೂ ರೂ. 1,25,000/-ಗಳ ಸಾಲವನ್ನು ವಾರ್ಷಿಕ ಶೇ 4ರ ಬಡ್ಡಿ ದರದಲ್ಲಿ ಆರ್ಥಿಕ ನೆರವು.

D. ಹಿಂದುಳಿದ ವರ್ಗಗಳ ಜನರು ಹೈನುಗಾರಿಕೆ ಚಟುವಟಿಕೆ ಕೈಗೊಳ್ಳಲು ಘಟಕ ವೆಚ್ಚ ತಲಾ ರೂ. 1.20 ಲಕ್ಷಗಳಲ್ಲಿ ರೂ. 10,000/-ಗಳ ಸಹಾಯಧನ ಮತ್ತು ರೂ. 1.10 ಲಕ್ಷಗಳ ಸಾಲ ಸೌಲಭ್ಯ.

E. ಸಾಂಪ್ರದಾಯಿಕ ವೃತ್ತಿದಾರರ ಉತ್ಪನ್ನಗಳಿಗೆ ಮಾರುಕಟ್ಟೆ ಒದಗಿಸಲು ಹಾಗೂ ಮಾರುಕಟ್ಟೆ ಜಾಲ ಏರ್ಪಡಿಸಲು ಗ್ರಾಮ ಪಂಚಾಯತ್ ಹಾಗೂ ಪಟ್ಟಣ ಪಂಚಾಯತ್ ಪ್ರದೇಶಗಳಲ್ಲಿ ಅಂದಾಜು ರೂ. 1.50 ಲಕ್ಷಗಳ ವೆಚ್ಚದಲ್ಲಿ ಮಳಿಗೆ ಸ್ಥಾಪನೆಗೆ ವಾರ್ಷಿಕ ಶೇ. 2ರ ಬಡ್ಡಿದರದಲ್ಲಿ ಸಾಲ ಮಂಜೂರು.

...2

ಈ ಮೇಲ್ಕಂಡ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಸರ್ಕಾರವು ಅನುಮೋದಿಸಿರುವ ಮಾರ್ಗಸೂಚಿಗಳಲ್ಲಿ ನಿಗಮದಿಂದ 1.00 ಲಕ್ಷರೂ.ಗಳ ವರೆಗಿನ ಸಾಲಕ್ಕೆ ಅರ್ಜಿದಾರರು ಹಾಗೂ ಜಾಮೀನುದಾರರಿಂದ ಸ್ಥಿರಾಸ್ತಿಯನ್ನು ನಿಗಮದ ಹೆಸರಿಗೆ ಮರುಪಾವತಿಯಾಗುವವರೆಗೂ ಡೀಡ್ ಮಾಡಿಸುವುದು ಮತ್ತು ನಿಗಮದ ಹೆಸರು ದಾಖಲಾಗಿರುವ ಬಗ್ಗೆ ಇ.ಸಿ ಪಡೆಯಬೇಕೆಂಬ ಷರತ್ತನ್ನು ವಿಧಿಸಲಾಗಿರುತ್ತದೆ. ಈ ಷರತ್ತನ್ನು ಸಡಿಲಗೊಳಿಸುವಂತೆ ಕೋರಿ ಉಲ್ಲೇಖ(7)ರ ಪ್ರಸ್ತಾವನೆಯಲ್ಲಿ ವ್ಯವಸ್ಥಾಪಕ ನಿರ್ದೇಶಕರು ಕೋರಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ:ಬಿಸಿಡಬ್ಲ್ಯೂ 1246 ಬಿಎಂಎಸ್ 2015, ಬೆಂಗಳೂರು**
**ದಿನಾಂಕ:10-03-2016**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಡಿ.ದೇವರಾಜಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಿಂದ ಅನುಷ್ಠಾನಗೊಳಿಸುತ್ತಿರುವ ಮೇಲ್ಕಂಡ 05 ಕಾರ್ಯಕ್ರಮಗಳಲ್ಲಿ ಹಾಲಿ ಇರುವ ಷರತ್ತನ್ನು ಸಡಿಲಗೊಳಿಸಿ, ಇನ್ನು ಮುಂದೆ ನಿಗಮದಿಂದ ಮಂಜೂರು ಮಾಡುವ ಸಾಲದ ಮೊತ್ತ ರೂ.1.00 ಲಕ್ಷಕ್ಕಿಂತ ಹೆಚ್ಚಿನ ಸಾಲಕ್ಕೆ ಫಲಾನುಭವಿ/ಜಾಮೀನುದಾರರಿಂದ ಸ್ಥಿರಾಸ್ತಿ ಆಧಾರ ಪಡೆದು ಸಾಲ ಮಂಜೂರು ಮಾಡಲು ಅನುಮತಿಸಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆ ಟಿಪ್ಪಣಿ ಸಂಖ್ಯೆ:ಆಇ 14/ವೆಚ್ಚ-3/2016, ದಿನಾಂಕ:03.03.2016ರ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಆರ್.ಭಾಸ್ಕರ್)
ಸರ್ಕಾರದ ಅಧೀನ ಕಾರ್ಯದರ್ಶಿ-2,
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ.

ಗೆ,

1. ಮಹಾಲೇಖಪಾಲರು, ಕರ್ನಾಟಕ ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರು, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಂಖ್ಯಿಕ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಸರ್ಕಾರದ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.
4. ವ್ಯವಸ್ಥಾಪಕ ನಿರ್ದೇಶಕರು, ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು.
5. ರಾಜ್ಯ ಹುಜೂರು ಖಜಾನೆ, ಬೆಂಗಳೂರು.

ಪ್ರತಿ:-

1. ಮಾನ್ಯ ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆರವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.
3. ಸರ್ಕಾರದ ಉಪ ಕಾರ್ಯದರ್ಶಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆರವರ ಆಪ್ತ ಸಹಾಯಕರು, ವಿಕಾಸಸೌಧ, ಬೆಂಗಳೂರು.
4. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.